ಪ್ರಮಾಣವಚನ ಬೋಧಿಸಿದ ದಿನಾಂಕಃ 24-12-2021

ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಬಿಆರ್‌ಎಂ ವಕೀಲರಿಂದ ಃ

25. ನಾನು ಲೋ.ಪೋಲೀಸರಿಗೆ ಫಿರ್ಯಾದು ಕೊಡುವ ದಿನಾಂಕದಂದು 2ನೇ ಆ.ನೌ ಸಿದ್ದಯ್ಯಸ್ವಾಮಿ ಇವರ ಹತ್ತಿರ ನನ್ನ ಕೆಲಸ ಯಾವುದು ಪೆಂಡಿಂಗ್ ಇರಲಿಲ್ಲಾ ಎಂದರೆ ಸರಿ.

26. ಭೂ-ಪರಿವರ್ತನಾ ಕೆಲಸಕ್ಕೆ ಖರ್ಚು ವೆಚ್ಚ ಸುಮಾರು 25 ರಿಂದ 30 ಸಾವಿರ ಆಗುತ್ತದೆ ಅಂತಾ ಹೇಳಿ 1ನೇ ಆ.ನೌ ಗುರುಪಾದಪ್ಪ ನನಗೆ ಹೇಳಿದ್ದರು ಎಂದರೆ ಸರಿ. ನಾನು ಲೋ.ಕಚೇರಿಗೆ ಫಿರ್ಯಾದು ಕೊಡುವ ಕಾಲಕ್ಕೆ ಯಾವ ರೀತಿ ಫಿರ್ಯಾದು ಬರೆಯಬೇಕು ಅಂತಾ ನನಗೆ ಗೊತ್ತಿಲ್ಲದ ಕಾರಣ ಲೋ.ಪೋಲೀಸರು ಹೇಳಿದ ರೀತಿಯಲ್ಲಿ ನಾನು ಫಿರ್ಯಾದನ್ನ ಬರೆದುಕೊಟ್ಟಿದ್ದೇನೆಂದರೆ ಸರಿ.

27. 2ನೇ ಆ.ನೌಕರ ಸಿದ್ದಯ್ಯ ಸ್ವಾಮಿ ನನ್ನ ಭೂ-ಪರಿವರ್ತನ ಕೆಲಸಕ್ಕೆ ಸಂಬಂಧಪಟ್ಟಂತೆ ಯಾವುದೇ ಲಂಚದ ಹಣಕ್ಕೆ ಬೇಡಿಕೆ ಇಟ್ಟಿಲ್ಲಾ ಎಂದರೆ ಸರಿ. ನಾನು ಲೋ.ಕಚೇರಿಗೆ ಹೋದಾಗ ಲಂಚದ ಹಣ ಕೊಟ್ಟರೆ ಮಾತ್ರ ನಾನು ನಿಮ್ಮ ಕೆಲಸ ಮಾಡುತ್ತೇನೆ ಅಂತಾ 2ನೇ ಆ.ನೌಕರ ಸಿದ್ದಯ್ಯಸ್ವಾಮಿ ನನಗೆ ಹೆಳಿಲ್ಲಾ ಎಂದರೆ ಸರಿ.

28. ನನ್ನ ಮತ್ತು 2ನೇ ಆ.ನೌಕರ ಸಿದ್ದಯ್ಯಸ್ವಾಮಿ ನಡುವೆ ಆದಂತ ಸಂಭಾಷಣೆಯನ್ನ ಸಿಡಿ ಗೆ ಪರಿವರ್ತನೆ ಮಾಡಿದ್ದು ಸಿ.ಡಿಯನ್ನು ನನಗೆ ತೋರಿಸಿದ್ದಾರೆ ಆದರೆ ಧ್ವನಿಯನ್ನ ಕೇಳಿಲ್ಲಾ ಎಂದರೆ ಸರಿ. ಸಾಕ್ಷಿ ಮುಂದುವರೆದ ವೈಸ್‌ರಿಕಾರ್ಡನಲ್ಲಿ ಕೇಳಿಸಿದ್ದಾರೆ ಅಂತಾ ಹೇಳುತ್ತಾರೆ. ವೈಸರಿಕಾರ್ಡರ ಯಾವ ಕಂಪನಿಯದು ಅಂತಾ ನನಗೆ ಗೊತ್ತಿಲ್ಲಾ, ವೈಸ್‌ರಿಕಾರ್ಡನಲ್ಲಿ ದಾಖಲಾದಂತ ಧ್ವನಿಯನ್ನ ಸಿ.ಡಿಗೆ ಪರಿವರ್ತನೆ ಮಾಡುವುದನ್ನ ನಿಮ್ಮ ಸಮಕ್ಷಮ ಮಾಡಿಲ್ಲಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲಾ ಅಂತಾ ಹೇಳುತ್ತಾರೆ. ಪುನಃ ಸಾಕ್ಷಿ ಮಾಡಿಲ್ಲಾ ಅಂತಾ ಹೇಳುತ್ತಾರೆ.

29. ಯಾವಾಗ ವೈಸ್‌ರಿಕಾರ್ಡನ ಸಂಭಾಷಣೆಯನ್ನ ಸಿ.ಡಿಗೆ ಪರಿವರ್ತನೆ ಮಾಡಿದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲಾ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ ಹೇ ಕೇ ಸರಿ ಇದೆ.

ವಿಶೇಷ ಮತ್ತು ಸತ್ರ ನ್ಯಾಯಾಧೀಶರು,
ಯಾದಗಿರಿ.

This document was created with the Win2PDF “print to PDF” printer available at
http://www.win2pdf.com

This version of Win2PDF 10 is for evaluation and non-commercial use only.

This page will not be added after purchasing Win2PDF.

http://www.win2pdf.com/purchase/